ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ

**ಸಿ.ಸಿ. ಸಂಖ್ಯೆ-2768/2016**

ಪಿರ್ಯಾದಿದಾರರು : ವಿಜಯಪುರ ಪೋಲಿಸ್ ಠಾಣೆ

ವಿರುದ್ಧ

ಆರೋಪಿ : ಎ 1. ಈರಪ್ಪ ಮತ್ತು ಮತ್ತೊಬ್ಬರು

**ದೋಷಾರೋಪಣೆ**

ಶ್ರೀ. ಕೆಂಚನಗೌಡ ಪಾಟೀಲ, ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ.ಎಫ್.ಸಿ ನ್ಯಾಯಾಲಯ, ದೇವನಹಳ್ಳಿ ಆದ ನಾನು ಆರೋಪಿಗಳಾದ

1. ಈರಪ್ಪ ಬಿನ್ ಮುನಿಸೊಣ್ಣಪ್ಪ
2. ಮುನಿರತ್ನಮ್ಮ ಕೊಂ ಕೃಷ್ಣಮೂರ್ತಿ

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ.17-12-2015 ರಂದು ಬೆಳಿಗ್ಗೆ 11.00 ಗಂಟೆಯ ಸಮಯದಲ್ಲಿ, ವಿಜಯಪುರ ಪೋಲೀಸ್ ಠಾಣಾ ಸರಹದ್ದಿನ ದೇವನಹಳ್ಳಿ ತಾಲ್ಲೂಕು, ವಿಜಯಪುರ ಹೋಬಳಿ, ಕೋರಮಂಗಲ ಗ್ರಾಮದ ಪಂಚಾಯಿತಿಯ ಹೌಸ್ ಲೀಸ್ಟ್ ನಂ. 24/ಬಿ ಮತ್ತು 188/2 ಸ್ವತ್ತಿನ ವಿಚಾರದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ದ್ವೇಷವನ್ನು ಇಟ್ಟುಕೊಂಡು, ಚಾಸಾ-1 ರವರ ಮೇಲೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಭಾ.ದಂ.ಸಂ. ಕಲಂ.504 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಿಸಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ಚಾಸಾ-1 ರವರನ್ನು ನೀವು ಪಂಚಾಯಿತಿ ಕಚೇರಿ ಬಳಿ ಬಂದರೆ ನಿನ್ನನ್ನು ಪ್ರಾಣ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತೀರಿ, ಆ ಮೂಲಕ ಭಾ.ದಂ.ಸಂ. ಕಲಂ. 506 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಿಸಿದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು, ಸಮಾನ ಉದ್ದೇಶದಿಂದ ಚಾಸಾ-1 ರವರ ಮೇಲೆ 1 ನೇ ಆರೋಪಿಯಾದ ನೀವು 2 ನೇ ಆರೋಪಿಯನ್ನು ಗಲಾಟೆ ಮಾಡಲು ಕುಮ್ಮಕ್ಕು ನೀಡಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂ 108 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಿಸಿದೆ.

ಆದುದರಿಂದ ಆರೋಪಿತರಾದ ನಿಮ್ಮ ವಿರುದ್ದ ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕಂದು ನಿರ್ದೇಶಿದ್ದೇನೆ.

**ಪ್ರಶ್ನೇ-1:** ಆರೋಪಿಯಾದ ನೀವು ಮೇಲೆ ಹೇಳಿದ ದೋಷಾರೋಪಣೆಯನ್ನು ಕೇಳಿದ್ದಿರಾ?

ಉತ್ತರ: ಎ 1.
ಎ 2.

**ಪ್ರಶ್ನೇ-2** ಆರೋಪಿಯಾದ ನೀವು ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿರಾ?

ಉತ್ತರಃ ಎ 1.
ಎ 2.

ಈ ಮೇಲೆ ಹೇಳಿದ ದೋಪಾರೋಪಣೆಯನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಅವರಿಗೆ ಅರ್ಥವಾಗುವಂತೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬಹಿರಂಗ ನ್ಯಾಯಾಲಯದಲ್ಲಿ ಯಥಾವತ್ತಾಗಿ ದಾಖಲು ಮಾಡಿಕೊಂಡಿರುತ್ತೇನೆ.

**2023 ನೇ ಇಸವಿ, ಫೆಬ್ರುವರಿ 14 ನೇ ತಾರೀಖು**

(ಶ್ರೀ. ಕೆಂಚನಗೌಡ ಪಾಟೀಲ)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ದೇವನಹಳ್ಳಿ